₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಶನಿವಾರ 27.04.2024** **ಸಂಪುಟ:** 09 **ಸಂಚಿಕೆ:** 124 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

69.23% ಮತದಾನ

ಪುಟ ತೆರೆದಂತೆ...

ಪಿತ್ರಾರ್ಜಿತ ಆಸ್ತಿಯ ಮೇಲೆ ತೆರಿಗೆ?
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
ಸಂ.ಪುಟ | 6

ಸಂಪತ್ತಿನ ಸಮಾನ ಹಂಚಿಕೆಯಲ್ಲಿ ಕಾಂಗ್ರೆಸ್ ವಿಲವಿಲ
ವರ್ತಮಾನ
ಪ್ರದೀಪ್ ಕುಮಾರ್ ಎಂ.
ಸಂ.ಗಮ | 7

ಭಾರತ ಮತ ಮಹಾ ಸಮರ
- ಗದ್ದಿಗೌಡರ ಗೆಲುವಿಗೆ ಬ್ರೇಕ್ ಹಾಕುವುದೇ ಕಾಂಗ್ರೆಸ್?
- ಇಂಡಿ ಮೈತ್ರಿಕೂಟ ಭ್ರಷ್ಟಾಚಾರಿಗಳಿಂದ ಭರ್ತಿ: ಜಗತ್ ಪ್ರಕಾಶ್ ನಡ್ಡಾ
- ಬಿಜೆಪಿಗೆ ಮತ, ಕಾಂಗ್ರೆಸ್‌ಗೆ ಚೊಂಬು: ಬಸವರಾಜ ಬೊಮ್ಮಾಯಿ

ಹೊಳೇನರಸೀಪುರ ಪಡುವಲಹಿಪ್ಪೆ ಗ್ರಾಮದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು

ಬೆಂಗಳೂರಿನ ಜಯನಗರದ ಮತಗಟ್ಟೆಯಲ್ಲಿ ಡಾ.ಸುಧಾಮೂರ್ತಿ

ಕನಕಪುರದ ದೊಡ್ಡ ಆಲದಹಳ್ಳಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಅನಿಲ್ ಕುಂಬ್ಳೆ ಪತ್ನಿ ಜತೆ ಮತದಾನ

ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಮತ್ತು ಹೇಮಾವತಿ ವೀ. ಹೆಗ್ಗಡೆ

ಪದ್ಮನಾಭನಗರದ ಮತಗಟ್ಟೆಯಲ್ಲಿ ಪತ್ನಿಯೊಂದಿಗೆ ರಮೇಶ್ ಅರವಿಂದ್

ಬೋರಿಂಗ್ ಬೆಂಗಳೂರು

ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ಕಡಿಮೆ ಮತದಾನ | ಮತಗಟ್ಟೆಗೆ ಬಾರದ ನಗರದ ಮಂದಿ, ಮತ್ತದೇ ನಿರ್ಲಕ್ಷ್ಯ
ಮಂಡ್ಯದಲ್ಲಿ ಅತಿ ಹೆಚ್ಚು, ಬೆಂಗಳೂರು ಉತ್ತರ ಕಡಿಮೆ | ಸಣ್ಣಪುಟ್ಟ ಘಟನೆ ಹೊರತುಪಡಿಸಿ ಎಲ್ಲೆಡೆ ಶಾಂತಿಯುತ

ಉಡುಪಿ ಚಿಕ್ಕಮಗಳೂರು	ಹಾಸನ	ದಕ್ಷಿಣ ಕನ್ನಡ	ಚಿತ್ರದುರ್ಗ	ತುಮಕೂರು	ಮಂಡ್ಯ	ಮೈಸೂರು	ಚಾಮರಾಜನಗರ	ಬೆಂ.ಗ್ರಾಮಾಂತರ	ಬೆಂಗಳೂರು ಉತ್ತರ	ಬೆಂಗಳೂರು ಕೇಂದ್ರ	ಬೆಂಗಳೂರು ದಕ್ಷಿಣ	ಚಿಕ್ಕಬಳ್ಳಾಪುರ	ಕೋಲಾರ
76.06%	77.51%	77.43%	73.11%	77.70%	81.48%	70.45%	76.59%	67.29%	54.42%	52.81%	53.15%	76.82%	78.07%

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭೆ ಚುನಾವಣೆ ಮೊದಲ ಹಂತದಲ್ಲಿ 14 ಕ್ಷೇತ್ರಗಳಿಗೆ ಶುಕ್ರವಾರ ನಡೆದ ಮತದಾನ ಒಂದೆರಡು ಸಣ್ಣ ಪುಟ್ಟ ಘಟನೆಗಳನ್ನು ಹೊರತುಪಡಿಸಿ ಬಹುತೇಕ ಶಾಂತಿಯುತವಾಗಿ ಪೂರ್ಣಗೊಂಡಿದೆ. 14 ಕ್ಷೇತ್ರಗಳಲ್ಲಿ ಒಟ್ಟಾರೆ ಶೇ. 69.23 ರಷ್ಟು ಮತದಾನವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ ಶೇ.81.48ರಷ್ಟು ಮತದಾನವಾಗಿದ್ದು, ಎಂದಿನಂತೆ ಬೆಂಗಳೂರಿನ ಮೂರು ಕ್ಷೇತ್ರಗಳಲ್ಲಿ ಅತಿ ಕಡಿಮೆ ಮತದಾನವಾಗಿದೆ. ಬೆಂಗಳೂರು ಉತ್ತರದಲ್ಲಿ ಅತಿ ಕಡಿಮೆ ಅಂದರೆ ಶೇ. 54.42ರಷ್ಟು ಮತದಾನವಾಗಿದ್ದು, ಬೆಂಗಳೂರು ದಕ್ಷಿಣದಲ್ಲಿ ಶೇ. 53.15, ಬೆಂಗಳೂರು ಕೇಂದ್ರದಲ್ಲಿ ಶೇ. 52.81ರಷ್ಟು ಮಂದಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಚಾಮರಾಜನಗರ ಲೋಕಸಭಾ ಕ್ಷೇತ್ರದ ಮಹದೇಶ್ವರಬೆಟ್ಟ ವ್ಯಾಪ್ತಿಯ ಇಂಡಿಗನತ್ತ ಗ್ರಾಮದಲ್ಲಿ ಗ್ರಾಮಕ್ಕೆ ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ ಮತದಾರರು ಕಲ್ಲು ತೂರಾಟ ನಡೆಸಿ ಇವಿಎಂ ಸೇರಿದಂತೆ ಮತಗಟ್ಟೆಯನ್ನೇ ಧ್ವಂಸ ಮಾಡಿದ್ದಾರೆ. ಮೂಲ ಸೌಕರ್ಯ ಕಲ್ಪಿಸಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದ್ದು, ಈ ವೇಳೆ ಅಧಿಕಾರಿಗಳು ಮನವೊಲಿಸಲು ಹೋದಾಗ ಆಕ್ರೋಶಗೊಂಡು ಅಧಿಕಾರಿಗಳು, ಪೊಲೀಸರು ಮತ್ತು ಮತಗಟ್ಟೆಯತ್ತ ಕಲ್ಲು ತೂರಿದ್ದಾರೆ. ಇದರಿಂದ ಅಧಿಕಾರಿಗಳು, ಪೊಲೀಸರು ಸೇರಿದಂತೆ ಕೆಲವು ಗ್ರಾಮಸ್ಥರಿಗೂ ಗಾಯವಾಗಿದ್ದು, ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

→ 8

ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ದರಾಮನ ಹುಂಡಿಯ ಮತಗಟ್ಟೆಯಲ್ಲಿ ಮತದಾನ ಮಾಡಿದರು.

ಮುಖ್ಯಾಂಶಗಳು
- ಚಾಮರಾಜನಗರ ಜಿಲ್ಲೆಯ ಇಂಡಿಗನತ್ತ ಗ್ರಾಮದಲ್ಲಿ ಇವಿಎಂ ಸೇರಿ ಮತಗಟ್ಟೆ ಧ್ವಂಸ
- ಅಧಿಕಾರಿಗಳು, ಪೊಲೀಸರು ಸೇರಿ ಕೆಲವು ಗ್ರಾಮಸ್ಥರಿಗೆ ಗಾಯ, ಲಾಠಿ ಪ್ರಹಾರ
- ಚಿತ್ರದುರ್ಗದ ಯರೆಹಳ್ಳಿ, ಸಿದ್ದಾಪುರದಲ್ಲಿ ಬಹಿಷ್ಕಾರ, ಸಿರಿಗೆರೆ ಶ್ರೀ ಸಂಧಾನ ಬಳಿಕ ಮತ
- ಚಿಕ್ಕಮಗಳೂರಿನ ಉಜ್ಜಿನಿ ಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತರ ನಡುವೆಯೇ ಘರ್ಷಣೆ
- ವಿವಿಧ ಕಡೆಗಳಲ್ಲಿ ಮತದಾನ ಮುಗಿಸಿ ಹೃದಯಾಘಾತದಿಂದ ಮೂವರು ಸಾವು
- ಒಳರೋಗಿಗಳಿಂದಲೂ ಮತ, ಮತಡಿಗಟ್ಟೆಗೆ ಆ್ಯಂಬುಲೆನ್ಸ್, ಗ್ರೀನ್ ಕಾರಿಡಾರ್ ವ್ಯವಸ್ಥೆ

ದೇಶಾದ್ಯಂತ 2ನೇ ಹಂತದಲ್ಲಿ ಶೇ.61 ಮತದಾನ
ದೇಶದಲ್ಲಿ 2ನೇ ಹಂತದ ಮತದಾನ ಮುಕ್ತಾಯವಾಗಿದ್ದು, 1202 ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆ ಸೇರಿದೆ. ಈ ಹಂತದಲ್ಲಿ ಕರ್ನಾಟಕ, ಕೇರಳ ಸೇರಿದಂತೆ ಪ್ರಮುಖ ರಾಜ್ಯಗಳಲ್ಲಿ ಮತದಾನವಾಗಿದೆ. ತ್ರಿಪುರದಲ್ಲಿ ಅತಿ ಹೆಚ್ಚು ಶೇ.79.04ರಷ್ಟು ಮತದಾನವಾಗಿದ್ದರೆ, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ಶೇ.54ರಷ್ಟು ಮಂದಿ ಮತ ಚಲಾಯಿಸಿದ್ದಾರೆ. ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಉತ್ತಮ ಮತದಾನವಾಗಿರುವುದು ವಿಶೇಷ.

ಮತದಾನದಲ್ಲಿ ಏರಿಕೆ
ಈ ಹಿಂದಿನ ಎರಡು ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿಯ ಚುನಾವಣೆಗಳಲ್ಲಿ 14 ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಒಟ್ಟಾರೆ ಮತದಾನ ಪ್ರಮಾಣ ಹೆಚ್ಚಾಗಿದೆ. 2014ರ ಲೋಕಸಭೆ ಚುನಾವಣೆಗಳಲ್ಲಿ ಶುಕ್ರವಾರ ಮತದಾನ ನಡೆದ 14 ಕ್ಷೇತ್ರಗಳಲ್ಲಿ ಶೇ. 67.37ರಷ್ಟು ಮತದಾನವಾಗಿದ್ದರೆ, 2019ರಲ್ಲಿ ಶೇ. 68.96ರಷ್ಟು ಮತದಾನವಾ ಗಿತ್ತು. ಈ ಬಾರಿ ಶೇ. 69.23ರಷ್ಟು ಮತದಾನವಾಗಿದೆ.

ಒಂದೇ ಕುಟುಂಬದ 85 ಮಂದಿ ಮತದಾನ
ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಮತಗಟ್ಟೆ ಸಂಖ್ಯೆ 161ರಲ್ಲಿ ಬಾದಾಮ್ ಕುಟುಂಬದ 85 ಸದಸ್ಯರು ಒಟ್ಟಾಗಿ ತೆರಳಿ ಮತದಾನ ಮಾಡಿ ದ್ದಾರೆ. ತಾಯಿ, ಮಗಳು, ಮೊಮ್ಮಕ್ಕಳು ಸೇರಿದಂತೆ ಎಲ್ಲರೂ ಒಟ್ಟಾಗಿ ಮತದಾನ ಕೇಂದ್ರಕ್ಕೆ ತೆರಳಿ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಮಾತಂದ್ರೆ ಮಾತು

ಹಿಂದೂ ಧರ್ಮಕ್ಕೆ ಅಪಾಯ ಇರುವುದು ಬಿಜೆಪಿಗರಿಂದಲೇ ಹೊರತು ಬೇರಾರಿಂದಲೂ ಅಲ್ಲ. ಬಿಜೆಪಿಗರು ತಾವೇ ಹಿಂದುತ್ವ ರಕ್ಷಣೆ ಮಾಡುತ್ತಿರುವವರು ಎನ್ನುತ್ತಾರೆ. ಮೊಘಲರು, ಬ್ರಿಟಿಷರು ಬಂದಾಗಲೂ ಹಿಂದೂ ಧರ್ಮಕ್ಕೆ ತೊಂದರೆಯಾಗಲು ಯಾರೂ ಬಿಟ್ಟಿರಲಿಲ್ಲ. ಆದರೆ ಅಂಥ ಮೋಸ ಈಗ ಬಿಜೆಪಿಯಿಂದ ಆಗುತ್ತಿದೆ. ಬಿಜೆಪಿಗರಿಂದ ನಮ್ಮ ಧರ್ಮ, ಸಂಸ್ಕೃತಿ, ರಕ್ಷಣೆ ಮಾಡಬೇಕಿದೆ. ನಾನು ಹಿಂದೂ ಧರ್ಮದಲ್ಲಿ ಹುಟ್ಟಿರಲು ನನಗೆ ಹೆಮ್ಮೆ ಇದೆ. ಬಿಜೆಪಿಗರಿಂದ ಹಿಂದುತ್ವದ ಪಾಠ ಕಲಿಬೇಕಿಲ್ಲ.

ಡಾ. ಅಂಜಲಿ ನಿಂಬಾಳ್ಕರ್
ಉತ್ತರ ಕನ್ನಡ ಕಾಂಗ್ರೆಸ್ ಅಭ್ಯರ್ಥಿ

ದಾರಿದೀಪೋಕ್ತಿ
ನಮ್ಮ ದೈನಂದಿನ ಜೀವನ ಯಾವತ್ತೂ ಒಂದೇ ರೀತಿ ಇರುವುದಿಲ್ಲ. ಒಂದು ದಿನ ಸಂತಸ ಮತ್ತು ಇನ್ನೊಂದು ದಿನ ಬೇಸರ. ಸಂತಸ ಇದ್ದಾಗ ಅಹಂಕಾರದಿಂದ ವರ್ತಿಸಬಾರದು. ಬೇಸರವಿದ್ದ ದಿನ ಭರವಸೆಯನ್ನು ಕಳೆದುಕೊಳ್ಳಬಾರದು.

ವಕ್ರತುಂಡೋಕ್ತಿ
ಈ ಭೂಮಿಯ ಮೇಲಿಂದ ಮನುಷ್ಯ ಸಂತತಿ ಸಂಪೂರ್ಣ ನಶಿಸಿ ಹೋದರೆ ಯಾರೂ ಕೇರ್ ಮಾಡುವುದಿಲ್ಲ.

ಆಯೋಗಕ್ಕೆ ಸುಪ್ರೀಂ ನೋಟಿಸ್

ನೋಟಾ ಗೆದ್ದರೆ ಮರು ಮತದಾನ?

ದೆಹಲಿ: ಕ್ಷೇತ್ರವೊಂದರಲ್ಲಿ ಅಭ್ಯರ್ಥಿಗಿಂತ ನೋಟಾಗೆ ಹೆಚ್ಚು ಮತ ಬಂದರೆ ಅಲ್ಲಿ ಮರು ಮತದಾನ ನಡೆಸಬಹುದೇ ಎಂಬ ಅಭಿಪ್ರಾಯ ಕೇಳಿ ಸುಪ್ರೀಂಕೋರ್ಟ್ ಕೇಂದ್ರ ಚುನಾವಣಾ ಆಯೋಗಕ್ಕೆ ನೋಟಿಸ್ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾ.ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ಪೀಠ ನೋಟಿಸ್ ಕೊಟ್ಟಿದೆ.

ವಕೀಲರಾದ ಗೋಪಾಲ್ ಶಂಕರ ನಾರಾಯಣನ್ ಮತ್ತು ಶ್ರೇತಾ ಮಜುಂದಾರ್ ಅವರು ನೋಟಾದ ಬಗ್ಗೆ ಗಮನ ಸೆಳೆದು, ಡಮಹಾರಾಷ್ಟ್ರ, ಹರ್ಯಾಣ, ದೆಹಲಿ ಮತ್ತು ಪುದುಚೇರಿಯಲ್ಲಿ ಮಹತ್ವದ ಬದಲಾವಣೆಯಾಗಿದೆ ಎಂದರು.

→ 8

ಫನ್‌ತರಂಗ
- ರಘುಪತಿ ಶೃಂಗೇರಿ -

ನೋಟಾಗೆ ಹೆಚ್ಚು ಮತ ಬಂದರೆ ಮರು ಚುನಾವಣೆ: ಸುಪ್ರೀಂ ನೋಟಿಸ್



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯಿಂದ ವ್ಯಂಗ್ಯ
ಈಗಾಗಲೇ ಫಲಿತಾಂಶದ ಬಗ್ಗೆ ಪ್ರಧಾನಿಗೆ ಗಾಬರಿ
ವೇದಿಕೆ ಮೇಲೆಯೇ ಕಣ್ಣೀರಾಗಲಿದ್ದಾರೆ ಎಂದ ಕೈ ನಾಯಕ
ವಿಜಯಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ

ಸದ್ಯದಲ್ಲೇ ಪ್ರಧಾನಿ ಮೋದಿ ಕಣ್ಣೀರು

ವಿಜಯಪುರ: ಲೋಕಸಭೆ ಫಲಿತಾಂಶದ ಬಗ್ಗೆ ಈಗಲೇ ಪ್ರಧಾನಿ ನರೇಂದ್ರ ಮೋದಿ ಅವರು ಗಾಬರಿಗೊಂಡಿದ್ದು, ಕೆಲವೇ ದಿನಗಳಲ್ಲಿ ವೇದಿಕೆ ಮೇಲೆಯೇ ಕಣ್ಣೀರು ಹಾಕಲಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವ್ಯಂಗ್ಯವಾಡಿದ್ದಾರೆ. ವಿಜಯಪುರದಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಿದ ಅವರು, ಬಿಜೆಪಿ ಕೆಲವೇ ಕೆಲವು ಬಿಲಿಯನೇರ್‌ಗಳ ಪರವಾಗಿದ್ದರೆ, ಕಾಂಗ್ರೆಸ್ ಕೋಟ್ಯಂತರ ಲಕ್ಷಾಧಿಪತಿಗಳನ್ನು ಸೃಷ್ಟಿಸಲು ಹೊರಟಿದೆ ಎಂದಿದ್ದಾರೆ.

ಮೋದಿಯವರ ಇತ್ತೀಚಿನ ಭಾಷಣ ಗಮನಿಸಿದರೆ ಅವರು ಗಾಬರಿಗೊಂಡಿರುವುದು ಗೊತ್ತಾಗುತ್ತದೆ. ಕೆಲವೇ ದಿನಗಳಲ್ಲಿ ವೇದಿಕೆ ಮೇಲೆ ಕಣ್ಣೀರು ಹಾಕಲಿದ್ದಾರೆ. 24 ಗಂಟೆ ಕಾಲ ನಿಮ್ಮದೇ ಧ್ಯಾನ ಮಾಡುತ್ತಾರೆ. ಪಾಕಿಸ್ತಾನ, ಚೀನಾ ಬಗ್ಗೆ ಮಾತನಾಡುತ್ತಾರೆ.

→ 8

ಕಲಬುರಗಿ ಮತ್ತು ಸುರಪುರದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಶುಕ್ರವಾರ ರೋಡ್ ಶೋ ನಡೆಸುವ ಮೂಲಕ ಪಕ್ಷದ ಅಭ್ಯರ್ಥಿಗಳಿಗೆ ಮತಯಾಚನೆ ಮಾಡಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಟೀಕೆ

ಇಂಡಿ ಭ್ರಷ್ಟಾಚಾರದ ಕೂಟ

ಕಲಬುರಗಿ: ಕಾಂಗ್ರೆಸ್ ನೇತೃತ್ವದಲ್ಲಿ ರಚನೆಗೊಂಡಿರುವ ಇಂಡಿ ಮೈತ್ರಿ ಕೂಟದಲ್ಲಿನ ಎಲ್ಲಾ ಪಕ್ಷಗಳು ಭ್ರಷ್ಟಾಚಾರದಿಂದ ತುಂಬಿರುವ ಪಕ್ಷಗಳಾಗಿವೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಹೇಳಿದ್ದಾರೆ.

ನಗರದಲ್ಲಿ ರೋಡ್ ಶೋ ನಡೆಸಿದ ಬಳಿಕ ಮಾತನಾಡಿದ ಅವರು, ಇಂಡಿ ಒಂದು ಘಮಂಡಿ ಒಕ್ಕೂಟವಾಗಿದೆ. ಮೈತ್ರಿಕೂಟದೊಳಗಿನ ಎಲ್ಲಾ ಪಕ್ಷಗಳ ನಾಯಕರು ಒಂದಿಲ್ಲೊಂದು ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗಿ ಬಂದವರಾಗಿದ್ದಾರೆ ಲೇವಡಿ ಮಾಡಿದರು.

ಕಳೆದ ಹತ್ತು ವರ್ಷಗಳ ಆಡಳಿತದ ಅವಧಿಯಲ್ಲಿ ನಾವು ದೇಶದಲ್ಲಿನ ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತಿದ್ದರೆ, ಇವರು ಭ್ರಷ್ಟಾಚಾರವನ್ನು ಎಸಗುತ್ತಿದ್ದಾರೆ. ಭ್ರಷ್ಟಾಚಾರದ ತನಿಖೆಗೆ ಆದೇಶ ಮಾಡಿದರೆ, ಅದನ್ನು ವಿರೋಧಿಸಲು ಪ್ರಯತ್ನ ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಕಳೆದ 50 ವರ್ಷಗಳ ಆಡಳಿತದ ಅವಧಿಯಲ್ಲಿ ಕಲ್ಲಿದ್ದಲು ಹಗರಣ, 2ಜಿ ಹಗರಣ, ಕಾಮನ್‌ವೆಲ್ತ್ ಹಗರಣ, ಹೆಲಿಕಾಪ್ಟರ್ ಹಗರಣ ಸೇರಿದಂತೆ ಹಲವು ಹಗರಣ ಮಾಡಿ, ಕಾಂಗ್ರೆಸ್ ಹಲವು ನಾಯಕರು ಇಂದು ಬೇಲ್ ಮೇಲೆ ತಿರುಗಾಟ ನಡೆಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

2025ರ ಶೈಕ್ಷಣಿಕ ವರ್ಷದಿಂದ ಜಾರಿ ಸಾಧ್ಯತೆ
ಸಿದ್ಧತೆ ಮಾಡಿಕೊಳ್ಳಲು ಸಿಬಿಎಸ್‌ಇಗೆ ಶಿಕ್ಷಣ ಸಚಿವಾಲಯ ಸೂಚನೆ | ಮುಂದಿನ ತಿಂಗಳು ಶಾಲಾ ಪ್ರಾಂಶುಪಾಲರೊಂದಿಗೆ ಸಮಾಲೋಚನೆ

ಇನ್ನು ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆ?

ದೆಹಲಿ: 2025-26ರ ಶೈಕ್ಷಣಿಕ ವರ್ಷದಿಂದ ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆ ನಡೆಸಲು ತಯಾರಿ ನಡೆಸಿರುವ ಕೇಂದ್ರ ಶಿಕ್ಷಣ ಸಚಿವಾಲಯ ಈ ಸಂಬಂಧ ಸಿದ್ಧತೆ ಮಾಡಿಕೊಳ್ಳುವಂತೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ(ಸಿಬಿಎಸ್‌ಇ)ಗೆ ಸೂಚಿಸಿದೆ. ಆದರೆ, ಸೆಮಿಸ್ಟರ್ ವ್ಯವಸ್ಥೆ ಜಾರಿಗೆ ತರುವುದಿಲ್ಲ ಎಂದು ಹೇಳಿದೆ.

ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಸಂಬಂಧ ಮುಂದಿನ ತಿಂಗಳು ಸಿಬಿಎಸ್‌ಇ ಶಾಲೆಗಳ ಪ್ರಾಂಶುಪಾಲರೊಂದಿಗೆ ಸಭೆ ನಡೆಸಲಿದೆ ಎಂದು ಮೂಲಗಳು ಹೇಳಿವೆ.

ಪದವಿಪೂರ್ವ ಪ್ರವೇಶ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರದೆ ಮತ್ತೊಂದು ಬೋರ್ಡ್ ಪರೀಕ್ಷೆಗಳಿಗೆ ಅವಕಾಶ ಕಲ್ಪಿಸಲು ಹೇಗೆ ಶೈಕ್ಷಣಿಕ ಕ್ಯಾಲೆಂಡರ್ ಅನ್ನು ರಚಿಸಬಹುದು ಎಂಬ ಬಗ್ಗೆ ಸಿಬಿಎಸ್‌ಇ ಕಾರ್ಯಯೋಜನೆ ರೂಪಿಸಿಸುತ್ತಿದೆ ಎಂದು ಹೇಳಲಾಗಿದೆ.

ಕಳೆದ ವರ್ಷ ಶಿಕ್ಷಣ ಸಚಿವಾಲಯ ಘೋಷಿಸಿದ ಹೊಸ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಪ್ರಕಾರ, ವಿದ್ಯಾರ್ಥಿಗಳಿಗೆ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಕಷ್ಟು ಸಮಯ ಮತ್ತು ಅವಕಾಶವಿದೆ ಎಂದು ಖಚಿತಪಡಿಸಿಕೊಳ್ಳಲು ಹಾಗೂ ಉತ್ತಮ ಸ್ಕೋರ್ ಉಳಿಸಿಕೊಳ್ಳುವ ಆಯ್ಕೆಯನ್ನು ಪಡೆಯಲು ಬೋರ್ಡ್ ಪರೀಕ್ಷೆಗಳನ್ನು ವರ್ಷಕ್ಕೆ ಎರಡು ಬಾರಿ ನಡೆಸಲಾಗುವುದು ಎಂದು ಹೇಳಲಾಗಿತ್ತು.

ಮತದಾರರಿಗೆ ಹಂಚಲು ಸಂಗ್ರಹಿಸಿದ್ದ ಹಣ | ಎಫ್‌ಐಆರ್ ದಾಖಲಿಸಿದ ಪೊಲೀಸರು
ಐಎಎಸ್ ಅಧಿಕಾರಿ ಬಳಿ ನೆರವು ಕೇಳಿದ್ದ ಆರೋಪ

ಡಾ.ಕೆ. ಸುಧಾಕರ್ ವಿರುದ್ಧ ಕೇಸ್ 4.8 ಕೋಟಿ ರು. ಜಪ್ತಿ

- ಖಚಿತ ಮಾಹಿತಿ ಮೇರೆಗೆ ಫ್ಲೈಯಿಂಗ್ ಸ್ಕ್ವಾಡ್ ತಂಡ ದಾಳಿ
- ಜನಪ್ರತಿನಿಧಿಗಳ ಕಾಯಿದೆಯ ಸೆಕ್ಷನ್ 123 ಹಾಗೂ ಐಪಿಸಿ ಸೆಕ್ಷನ್ 171 (ಬಿ,ಸಿ,ಇ,ಎಫ್)

ಬೆಂಗಳೂರು: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ವಿರುದ್ಧ ಚುನಾವಣಾ ಆಯೋಗ ಪ್ರಕರಣ ದಾಖಲಿಸಿದ್ದು, ಅವರಿಗೆ ಸೇರಿದ್ದು ಎನ್ನಲಾದ 4.8 ಕೋಟಿ ರು. ಜಪ್ತಿ ಮಾಡಲಾಗಿದೆ. ಈ ಮಧ್ಯೆ ಸುಧಾಕರ್ ಅವರು ಐಟಿ ದಾಳಿ ನಡೆಯುತ್ತಿದ್ದಂತೆ ಎಂಸಿಸಿ ನೋಡಲ್ ಅಧಿಕಾರಿ ಮುನೀಶ್ ಮೌದ್ಗಿಲ್ ಅವರಿಗೆ ವಾಟ್ಸಾಪ್ ಕರೆ ಮಾಡಿರುವುದು, ದಯವಿಟ್ಟು ಸಹಾಯ ಮಾಡಿ, ನಾನು ನಿಮಗೆ ಆಭಾರಿಯಾಗಿರುತ್ತೇನೆ ಎಂದು ಸಂದೇಶ ಕಳುಹಿಸಿರುವುದು ಕುತೂಹಲ ಕೆರಳಿಸಿದೆ.

→ 8

ಇವಿಎಂಗಳ ಬಗ್ಗೆ ಅನುಮಾನ ವ್ಯಕ್ತಪಡಿಸಿ ಅರ್ಜಿ | ಅರ್ಜಿಗಳ ತಿರಸ್ಕರಿಸಿದ ಸುಪ್ರೀಂಕೋರ್ಟ್

ಇವಿಎಂಗಳಿಗೆ ಸುಪ್ರೀಂ ಮುದ್ರೆ

ದೆಹಲಿ: ವಿದ್ಯುನ್ಮಾನ ಮತಯಂತ್ರಗಳಲ್ಲಿ ಚಲಾವಣೆಯಾದ ಮತಗಳನ್ನು ವಿವಿಪ್ಯಾಟ್ ವಿಧಾನದ ಮೂಲಕ ಉತ್ಪತ್ತಿಯಾದ ಪೇಪರ್ ಸ್ಲಿಪ್‌ಗಳನ್ನು ಸಂಪೂರ್ಣವಾಗಿ ಎಣಿಸಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ.

ಎಡಿಆರ್ ಸೇರಿದಂತೆ ವಿವಿಧ ಸಂಸ್ಥೆಗಳು ಸಲ್ಲಿಕೆ ಮಾಡಿದ್ದ ಅರ್ಜಿ ಸಂಬಂಧ ಸುದೀರ್ಘವಾಗಿ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠ, ಚುನಾವಣಾ ಆಯೋಗಕ್ಕೂ ಎರಡು ನಿರ್ದೇಶನಗಳನ್ನು ನೀಡಿದೆ. ನ್ಯಾ. ದೀಪಂಕರ್ ದತ್ತಾ ಮತ್ತು ನ್ಯಾ. ಸಂಜೀವ್ ಖನ್ನಾ ಅವರು ಪ್ರತ್ಯೇಕ ತೀರ್ಪುಗಳನ್ನು ನೀಡಿದರೂ, ಅವು ಸಹಮತದ ತೀರ್ಪುಗಳಾಗಿವೆ.

ಇವಿಎಂಗಳಿಗೆ ಚಿಹ್ನೆಗಳನ್ನು ಲೋಡ್ ಮಾಡಿದ ಬಳಿಕ ಲೋಡಿಂಗ್ ಘಟಕವನ್ನು ಸೀಲ್ ಮಾಡಬೇಕು ಮತ್ತು ಏಜೆಂಟರು ಹಾಗೂ ಅಭ್ಯರ್ಥಿಗಳ ಸಮ್ಮುಖದಲ್ಲೇ ಕಂಟೇನರ್‌ಗಳಲ್ಲಿ ಭದ್ರಪಡಿಸಬೇಕು ಎಂದಿದೆ. ಎಸ್‌ಎಲ್‌ಯುಗಳನ್ನು ಒಳಗೊಂಡಿ ರುವ ಸೀಲ್ ಮಾಡಿದ ಕಂಟೇನರ್‌ಗಳನ್ನು ಫಲಿತಾಂಶ ಪ್ರಕಟವಾದ ನಂತರ ಕನಿಷ್ಠ 45 ದಿನಗಳವರೆಗೆ ಇವಿಎಂಗಳೊಂದಿಗೆ ಸ್ಟೋರ್ ರೂಮ್‌ಗಳಲ್ಲಿ ಇಡಬೇಕು ಎಂದು ನ್ಯಾಯಾಲಯ ಹೇಳಿದೆ.

→ 8

ಪ್ರತಿಪಕ್ಷಗಳಿಗೆ ಕಪಾಳಮೋಕ್ಷ
ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪ್ರಧಾನಿ ಮೋದಿ ಅವರು, ಪ್ರತಿಪಕ್ಷಗಳಿಗೆ ಕಪಾಳಮೋಕ್ಷ ಸಿಕ್ಕಂತಾಗಿದೆ ಎಂದಿದ್ದಾರೆ. ಪ್ರತಿಪಕ್ಷಗಳ ಗುಂಪಿನ ಪ್ರತಿಯೊಬ್ಬ ನಾಯಕನೂ ಇವಿಎಂಗಳ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ಈಗ ಈ ಅನುಮಾನಗಳನ್ನು ಸುಪ್ರೀಂಕೋರ್ಟ್ ನಿವಾರಿಸಿದೆ. ಹೀಗಾಗಿ, ಮತ್ತೆ ಬ್ಯಾಲೆಟ್ ಪೇಪರ್ ಮತದಾನ ತರಬೇಕು ಎಂಬ ಪ್ರತಿಪಕ್ಷಗಳ ಕನಸು ಭಗ್ನಗೊಂಡಿದೆ ಎಂದಿದ್ದಾರೆ.

ಪಟ್ಟಭದ್ರ ಹಿತಾಸಕ್ತಿಗಳ ಬಗ್ಗೆ ಎಚ್ಚರ ಇರಲಿ
- ಎಡಿಆರ್‌ಗೆ ಚಳಿ ಬಿಡಿಸಿದ ಸುಪ್ರೀಂಕೋರ್ಟ್
- ಅರ್ಜಿದಾರರ ವಿಶ್ವಾಸಾರ್ಹತೆ ಬಗ್ಗೆಯೇ ಪ್ರಶ್ನೆ
- ದೇಶದ ಖ್ಯಾತಿಗೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿದ್ದೀರಿ
- ವ್ಯವಸ್ಥೆ ಬಗ್ಗೆ ಅನುಮಾನಿಸುವುದು ಸರಿಯಲ್ಲ
- ಭಾರತದ ಸಾಧನೆಗಳನ್ನು ದುರ್ಬಲಗೊಳಿಸಲು ಪಟ್ಟಭದ್ರರಿಂದ ಯತ್ನ
- ಮೊಗ್ಗಿನಲ್ಲಿ ಇಂಥ ಹಿತಾಸಕ್ತಿಗಳನ್ನು ತಡೆಯಬೇಕು ಎಂದ ನ್ಯಾ.ದೀಪಂಕರ್ ದತ್ತಾ

ಅರವಿಂದ ಕೇಜ್ರಿವಾಲ್ ವಿರುದ್ಧ ದೆಹಲಿ ಹೈಕೋರ್ಟ್ ಕಿಡಿ

ಅಧಿಕಾರದ ಮೇಲೆ ಲಾಲಸೆ ಏಕೆ?

ದೆಹಲಿ: ಅಬಕಾರಿ ಹಗರಣ ಸಂಬಂಧ ಜೈಲಿನಲ್ಲಿದ್ದರೂ ಇನ್ನೂ ರಾಜೀನಾಮೆ ನೀಡದ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ದೆಹಲಿ ಹೈಕೋರ್ಟ್ ಶುಕ್ರವಾರ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಕೇಜ್ರಿವಾಲ್ ಅವರು ರಾಜೀನಾಮೆ ನೀಡದೆ ರಾಷ್ಟ್ರೀಯ ಹಿತಾಸಕ್ತಿಗಿಂತ ವೈಯಕ್ತಿಕ ಹಿತಾಸಕ್ತಿಗೆ ಆದ್ಯತೆ ನೀಡಿದ್ದಾರೆ ಎಂದು ಕೋರ್ಟ್ ಹೇಳಿದೆ.

ದೆಹಲಿಯ ಎಎಪಿ ನೇತೃತ್ವದ ದೆಹಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ನ್ಯಾಯಾಲಯ, ಅದು ಅಧಿಕಾರದಲ್ಲಿ ಮಾತ್ರ ಆಸಕ್ತಿ ಹೊಂದಿದೆ ಎಂದು ಹೇಳಿದೆ. ಸರ್ಕಾರಿ ಶಾಲೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರಗಳು ಲಭ್ಯವಿಲ್ಲದಿರುವ ಬಗ್ಗೆ ನ್ಯಾಯಾಲಯವು ದೆಹಲಿ ಸರ್ಕಾರ ವನ್ನು ತರಾಟೆಗೆ ತೆಗೆದುಕೊಂಡಿತು.

ವಿದ್ಯಾರ್ಥಿಗಳ ಬಳಿ ಪುಸ್ತಕಗಳಿಲ್ಲದ ಬಗ್ಗೆ ದೆಹಲಿ ಸರ್ಕಾರ ಕನಿಷ್ಠ ಕಾಳಜಿ ವಹಿಸಿದೆ ಎಂದು ನ್ಯಾಯಾಲಯ ಹೇಳಿದೆ. ನಿಮ್ಮ ಕಕ್ಷಿದಾರರಿಗೆ ಅಧಿಕಾರದಲ್ಲಿ ಆಸಕ್ತಿ ಇದೆ. ನಿಮಗೆ ಎಷ್ಟು ಅಧಿಕಾರ ಬೇಕು ಎಂಬುದು ತಮಗೆ ತಿಳಿಯುತ್ತಿಲ್ಲ ಎಂದಿದೆ. ನೋಟ್‌ಬುಕ್‌ಗಳು, ಲೇಖನ ಸಾಮಗ್ರಿಗಳು, ಸಮವಸ್ತ್ರ ಮತ್ತು ಶಾಲಾ ಚೀಲಗಳನ್ನು ವಿತರಿಸದಿರಲು 'ಸ್ಥಾಯಿ ಸಮಿತಿಗಳನ್ನು ರಚಿಸದಿರುವುದು' ಒಂದು ಪ್ರಮುಖ ಕಾರಣ ಎಂದು ಎಂಸಿಡಿ ಆಯುಕ್ತರು ಗಮನಸೆಳೆದ ನಂತರ ಈ ಕ್ರಮ ಕೈಗೊಳ್ಳಲಾಗಿದೆ. ಐದು ಕೋಟಿಗಿಂತ ಹೆಚ್ಚಿನ ಮೌಲ್ಯದ ಗುತ್ತಿಗೆಗಳನ್ನು ನೀಡುವ ಅಧಿಕಾರ ಮತ್ತು ಅಧಿಕಾರ ಸ್ಥಾಯಿ ಸಮಿತಿಗೆ ಮಾತ್ರ ಇದೆ ಎಂದು ಅವರು ಹೇಳಿದ್ದಾರೆ.

ಸಚಿವರ ವಿರುದ್ಧವೂ ಸಿಟ್ಟು
ಪ್ರಸ್ತುತ ಬಂಧನದಲ್ಲಿರುವ ಮುಖ್ಯಮಂತ್ರಿಯ ಒಪ್ಪಿಗೆ ಅಗತ್ಯ ಎಂದು ಎಎಪಿ ಸಚಿವ ಸೌರಭ್ ಭಾರದ್ವಾಜ್ ಅವರಿಂದ ಸೂಚನೆ ಬಂದಿದೆ ಎಂದು ದೆಹಲಿ ಸರ್ಕಾರದ ವಕೀಲರು ಶುಕ್ರವಾರ ನ್ಯಾಯಾಲ ಯಕ್ಕೆ ಮಾಹಿತಿ ನೀಡಿದರು.
ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯ, ಮುಖ್ಯಮಂತ್ರಿ ಬಂಧನದಲ್ಲಿದ್ದರೂ ಸರ್ಕಾರ ಮುಂದುವರಿಯುತ್ತದೆ ಎಂದು ನೀವು ಹೇಳಿದ್ದು ನಿಮ್ಮ ಆಯ್ಕೆ. ನಾವು ಹೋಗಲು ಬಯಸದ ರಸ್ತೆಯಲ್ಲಿ ಹೋಗುವಂತೆ ನೀವು ನಮ್ಮನ್ನು ಒತ್ತಾಯಿಸುತ್ತಿದ್ದೀರಿ ಎಂದು ಕೋರ್ಟ್ ಹೇಳಿದೆ.